ಶ್ರೀ ಇ. ನಾರಾಯಣ ಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಇವರಿಗೋಸ್ಕರ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರ ಮೂಲಕ ಇವರಿಗೆ ಸಹಾನುಭೂತಿಯಿಂದ ಸಹಾಯ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅವಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೆಲವು ಕಾರ್ಖಾನೆಗಳಿಗೆ ಅರ್ಜಿಗಳನ್ನು ಕಳುಹಿಸಲಾಗಿದೆ ಎಂದು ಮಂತ್ರಿಗಳು ಈಗತಾನೆ ಹೇಳಿದರು. ಭದ್ರಾವತಿ ಕಾರ್ಖಾನೆಗೆ ಏಕೆ ಕೆಲವಾರು ಅರ್ಜಿಗಳನ್ನು ಕಳುಹಿಸಲಿಲ್ಲ ?

ಶ್ರೀ ಬಿ. ಡಿ. ಜತ್ತಿ.—ಭದ್ರಾವತಿಯೊಳಗೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದು ಅವರ ಕೈಲಿ ಆಗುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—4,300 ಅರ್ಜಿಗಳಲ್ಲಿ ಸೌತ್ ಕೆನರಾದಿಂದ ಅರ್ಜಿಗಳು ಎಷ್ಟು ಬಂದಿವೆ ?

ಶ್ರೀ ಬಿ. ಡಿ. ಜತ್ತಿ.—ಜಿಲ್ಲಾವಾರು ಪ್ರತ್ಯೇಕವಾಗಿ ಏನೂ ಕೊಟ್ಟಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನು ಒದಗಿಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಕ್ಕಸಾಲಿಗರು ಸೌತ್ ಕೆನರಾದಲ್ಲಿ ನಿರುದ್ಯೋಗಿಗಳಾಗುವುದಕ್ಕೆ ಅದರ ವಿಶೇಷವೇನು ?

ಶ್ರೀ ಬಿ. ಡಿ. ಜತ್ತಿ.—ನಾವು ಯಾರಿಗೂ ಈ ಬಗ್ಗೆ ಅರ್ಜಿಗಳನ್ನು ಕೊಡಬಾರದು ಎಂದು ಹೇಳಲಿಲ್ಲ ಸಿಂಪತಿಟಿಕ್ ಕನ್ಸಿಡರೇಷನ್ ಮಾಡುವುದಿಲ್ಲವೆಂದು ಏನೂ ಹೇಳಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ಕಸಾಲಿಗರಿಗೆ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿರುವುದರಿಂದ ಅವರು ಮಾಡತಕ್ಕ ಕಸುಬಿಗೆ ಈಗ ಧಕ್ಕೆ ಬಂದಿರುವುದರಿಂದ, ಮುಂದೆ ಅವರು ಜೀವನ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅವರ ಕಡೆಯಿಂದ ಅಂತಹ ಸಲಹೆ ಏನೂ ಬಂದಿಲ್ಲ. ಮಾನ್ಯ ಸದಸ್ಯರು ಅವರ ಸಂಘದ ಪರವಾಗಿ ಜವಾಬ್ದಾರಿ ತೆಗೆದುಕೊಂಡರೆ, ವಿಚಾರ ಮಾಡುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸರ್ಕಾರದವರ ಆಜ್ಞೆ ಪ್ರಕಾರ 14 ಕ್ಯಾರೆಟ್‌ನಲ್ಲಾದರೂ ಚಿನ್ನದ ಆಭರಣಗಳನ್ನು ಅಕ್ಕಸಾಲಿಗರು ಮಾಡುವುದನ್ನೇನೂ ನಿಲ್ಲಿಸಿಲ್ಲ. ಆದರೆ ಎಲ್ಲರನ್ನೂ ಬೇರೆ ಕಡೆಗೆ ಉದ್ಯೋಗಗಳ ಮೇಲೆ ಕಳುಹಿಸಿಕೊಟ್ಟರೆ ಮುಂದೆ ಚಿನ್ನದ ಕೆಲಸಗಳನ್ನು ಮಾಡುವುದಕ್ಕಾಗಿ ಯಾರನ್ನು ತರುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಎಲ್ಲರನ್ನೂ ಕಳುಹಿಸುತ್ತೇವೆ ಎಂಬುದಾಗಿ ಹೇಳಲಿಲ್ಲ. ಅದು ತಮ್ಮ ಅಭಿಪ್ರಾಯದ ಮಾತು. ನಮ್ಮ ಅಭಿಪ್ರಾಯ ಆ ರೀತಿ ಇಲ್ಲ.

QUESTIONS FOR ANSWERS ON THE DAY

(but not taken up)

Promotions given in the Department of Animal Husbandry.

*Q.—129. Sri C. V. VENKATARAYAPPA (Chickballapur).—

Will the Government be pleased to state :—

(*a*) whether it is a fact that Cadre and Recruitment Rules have not been followed in the Department of Animal Husbandry while giving promotions ;

(*b*) whether it is a fact that the High Court has issued Writ of Mandamus staying all promotions in the above Department since the Department did not follow Cadre and Recruitment Rules.

(*c*) whether it is not a fact that the Department did not advertise the vacancies in spite of the fact that the Public Service Commission reminded the Department ?

A.—Sri M. V. KRISHNAPPA (Minister for Revenue).—

(*a*) The Cadre and Recruitment Rules which came into force on 13th March 1959 are being followed while giving promotions in the Department.

(*b*) The High Court had issued a stay order in respect of promotions in the Department. The writ petitions has since been dismissed.

(*c*) No.

Bifurcation and Decentralisation of Industries Department.

*Q.—471. Sri R. A. KOPPAL (Hubli City).—

Will the Government be pleased to state:—

whether it is proposed to bifurcate Industries Department and decentralise the same; and if so, the time required for implementation of such a scheme;

A.—Sri K. MALLAPPA (Minister for Industries and Commerce).—No.

Intimation of Release of a Member.

Mr. SPEAKER.—Before we take up the other work, I have to bring to the notice of the House that the Government under order dated 16th March 1963 have directed the release of Sri A. Krishna Shetty, M.L.A., detained in the Central Jail, Bellary.

BUDGET ESTIMATES FOR 1963-64—DEMANDS FOR GRANTS—DEMAND No. 31-50 PUBLIC WORKS

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಾನು ನಿನ್ನೆ ಲೋಕೋಪಯೋಗಿ ಖಾತೆಯ ಮೇಲೆ ಮಾತನಾಡುತ್ತಿದ್ದೆ. ನಮ್ಮಲ್ಲಿ ಮೈನರ್ ನೀರಾವರಿಯ ಅಗತ್ಯ ಹೆಚ್ಚಾಗಿದೆ, ಆದರೆ ಕೆಲಸ ಕಡಮೆಯಾಗಿದೆ. ಇದರ 'ಜೆಂಪ್ಸೋ' ಹೆಚ್ಚು ಮಾಡಬೇಕಾದರೆ, ಬರಿಯ ಭಾಷಣಗಳನ್ನೂ, ಹೇಳಿಕೆಗಳನ್ನೂ ಮಾಡಿಕೊಂಡು ಹೋದರೆ ಪ್ರಯೋಜನವಿಲ್ಲ. ಹೆಚ್ಚು ಆಹಾರ ಬೆಳೆಯಬೇಕು, ಹೆಚ್ಚು ಕೆಲಸ ಆಗಬೇಕು ಎಂದು ಸರ್ಕಾರದವರು ಸೂಚನೆ ಕೊಡುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಅಲ್ಲಲ್ಲಿ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ. ಹಳ್ಳಿಗಳಲ್ಲಿ ಸಣ್ಣ ಕೆರೆ ಕಟ್ಟೆಗಳನ್ನು ಮಾಡಿಸಬೇಕಾದರೆ ನೀವು ಹಣಕೊಡಿ, ನಿಮ್ಮ ಕಾಂಟ್ರಿಬ್ಯೂಷನ್ ಕೊಡಿ, ಸರ್ಕಾರಕ್ಕೆ ಹಣ ಬೇಕಾಗಿದೆ, ನೀವು ಕೊಟ್ಟರೆ ನಿಮಗೂ ಅನುಕೂಲ ಸರ್ಕಾರಕ್ಕೂ ಅನುಕೂಲ ಎಂದು ಹೇಳುತ್ತಿದ್ದಾರೆ. ನಾವು ಹಣಕೊಡಲು ಮುಂದೆ ಬಂದರೆ ಸರಿ ಇಲ್ಲದಿದ್ದರೆ ಕೇಳಬೇಡಿ ಎಂದು ಅವರು ಹೇಳುವುದು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದು ನಿಮ್ಮ ಅರ್ಥ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ಅರ್ಥವೂ ಹಾಗೆಯೇ.

ಸರ್ಕಾರ ಹಾಗೆ ಕೇಳುವುದಕ್ಕೆ ಬದಲು ಬೇರೆ ರೀತಿ ಮಾಡಬಹುದು. ಬೇರೆ ಅಭಿವೃದ್ಧಿ ಕೆಲಸಗಳಿಗೆ ಅವರಿಗೆ ಹಣ ಬೇಕಾದರೆ ಸಾಲ ಮಾಡುತ್ತಾರೆ. ಹಾಗೆಯೇ ಮೈನರ್ ಮತ್ತು ಮೀಡಿಯಮ್ ನೀರಾವರಿ ಕೆಲಸಗಳಿಗೆ ಸರ್ಕಾರದವರು 25-30 ಕೋಟಿ ರೂಪಾಯಿ ಸಾಲಮಾಡಲಿ. ಒಂದು ಲೋನ್ ಎತ್ತಿ ಅದನ್ನು ಇದಕ್ಕೆ ಖರ್ಚು ಮಾಡುತ್ತೇವೆಂದು ಹೇಳಲಿ. ಇದು ಬಿಟ್ಟು ಹಳ್ಳಿಯವರನ್ನು ಕೇಳಿದರೆ, ಒಂದು ಗ್ರಾಮದಲ್ಲಿ ಯಾರಾದರೂ ಹತ್ತು ಜನರು ಹಣಕೊಡಲು ಮುಂದೆ ಬರಬಹುದು; ಎರಡು ಸಾವಿರ ಕೊಡುತ್ತೇವೆಂದು ಹೇಳಬಹುದು. ಇದರಿಂದ ಕಾಮಗಾರಿಗಳಾಗುವುದಿಲ್ಲ. ನಿಜವಾಗಿಯೂ ಸರ್ಕಾರದವರು ಮೈನರ್ ನೀರಾವರಿ ಕೆಲಸವನ್ನು ಕೈಗೊಂಡು ಮೂರನೇ ಯೋಜನೆ ಮುಗಿಯುವುದರಲ್ಲಿ ಕೊನೆಯ ಪಕ್ಷ ಬೇರೆ ರಾಜ್ಯಗಳಲ್ಲರುವಂತೆ ಸೇಕಡ 20ರಷ್ಟು